ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 19-12-2020 ರಂದು ನಡೆದ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಡಿಸೆಂಬರ್-2020 ರ ಮಾಹೆಯ ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ವಾರ್ಡಿನ ಜಸ್ಮಾ ದೇವಿ ಕಲ್ಯಣ ಮಂಟಪದಲ್ಲಿ ದಿನಾಂಕ: 19-12-2020 ರಂದು ನೆಡೆಸಲಾಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಸನ್ಮಾನ್ಯ ಶ್ರೀ. ಎನ್.ಎ. ಹ್ಯಾರೀಸ್ ರವರು | ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ |
| 2 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 3 | ಡಿ. ಮೂರ್ತಿ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 114 |
| 4 | ಆರ್. ಮಧು | ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ |
| 5 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 6 | ಆರ್. ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 7 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 8 | ಡಾ॥ ಶ್ರೀನಿವಾಸ್ | ಆರೋಗ್ಯ ವೈದ್ಯಾಧಿಕಾರಿಗಳು, ಶಾಂತಿನಗರ ವಲಯ |
| 9 | ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 10 | ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು ಇ-6, ಬೆಸ್ಕಾಂ |
| 11 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 12 | ಎಂ ವಿಜಯ್‌ಕುಮಾರ್ | ಸಹಾಯಕ ಅಭಿಯಂತರರು, ಸ್ಲಂ ಬೋರ್ಡ್ |
| 13 | ಕೆ ಪುರುಷೋತ್ತಮ | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ |
| 14 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 15 | ಶ್ರೀನಿವಾಸ್ | Animal Husbandary |

| | | |
|---|---|---|
| 16 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರುವಾರ್ಡ್ ಸಂಖ್ಯೆ: 112 |
| 17 | ಬಿ ಚಂದ್ರಶೇಖರ್ | ಸಹಾಯಕ ಅಭಿಯಂತರರು,<br>ಬೃಹತ್ ನೀರುಗಾಲುವೆ, ಬಿಬಿಎಂಪಿ |
| 18 | ಸಂತೋಷ್ ಕುಮಾರ | AE, WMM CV-1 (BWSSB) |
| 19 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 20 | ಪ್ರಭು ಬಿ ಸಿ | ಕೆಲಸ ಪರಿವೀಕ್ಷಕರು<br>ವಾರ್ಡ್ ಸಂಖ್ಯೆ: 114 |
| 21 | ಗಾಯತ್ರಿ | ಟೈಲರಿಂಗ್ ಶಿಕ್ಷಕರು, ಬಿಬಿಎಂಪಿ |
| 22 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 23 | ಅಂಗರಾಜ್ ಸಿ | Asst. Drugs controller |
| 24 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು<br>ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| 25 | ಬಸವರಾಜ್ ಕುಮಾರ್ | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್,<br>ಹಲಸೂರು ಪೋಲೀಸ್ ಠಾಣೆ |
| 26 | ಪದ್ಮರಾಜ್ ಖೋತ್ | ಸಹಾಯಕ ಅಭಿಯಂತರರು<br>ಯೋಜನೆ-ಪೂರ್ವ |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು** | | |
| 1 | ರಾಧ | ವಾರ್ಡ್ ಸಮಿತಿ ಸದಸ್ಯರು |
| 2 | ಭವಾನಿ | ವಾರ್ಡ್ ಸಮಿತಿ ಸದಸ್ಯರು |
| 3 | ವಸಂತ | ವಾರ್ಡ್ ಸಮಿತಿ ಸದಸ್ಯರು |
| 4 | ಪುರುಷೋತ್ತಮ | ವಾರ್ಡ್ ಸಮಿತಿ ಸದಸ್ಯರು |
| 5 | ಸರವಣ | ವಾರ್ಡ್ ಸಮಿತಿ ಸದಸ್ಯರು |
| 6 | ನಂಧ ಪಿ.ಕೆ | ವಾರ್ಡ್ ಸಮಿತಿ ಸದಸ್ಯರು |
| 7 | ರಾಜಕುಟ್ಟಿ | ವಾರ್ಡ್ ಸಮಿತಿ ಸದಸ್ಯರು |
| 8 | ಗೀತ ಶ್ರೀನಿವಾಸ್ | ವಾರ್ಡ್ ಸಮಿತಿ ಸದಸ್ಯರು<br>(ಜೀವನಕೇಂದ್ರ ಬಡಾವಣೆ ಅಸೋಸಿಯೇಷನ್) |

**ದಿನಾಂಕ: 19-12-2020** ರಂದು ಮದ್ಯಾಹ್ನ 2-00 ಗಂಟೆಗೆ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

**ಶ್ರೀ. ಡಿ. ಮೂರ್ತಿ**, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

**ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

1. ರಾಜಕುಟ್ಟಿ ರವರು ಸಲ್ಲಿಸಿರುವ ಮನವಿ:
   - ಎ. ಯರಪ್ಪ ಗಾರ್ಡನ್‌ನಲ್ಲಿ ನೀರಿನ ಸಮಸ್ಯೆ
   - ಬಿ. ಆಸ್ಟಿನ್‌ಟೌನ್ 1ನೇ ಸ್ಕ್ವೇರ್ ಗ್ರೌಂಡ್‌ನ ಸಮಸ್ಯೆ ಕುರಿತು.
   - ಸಿ. ಬಾಯ್ಸ್ ಸ್ಕೂಲ್ ಹತ್ತಿರ ಕಸದ ಗಾಡಿಗಳನ್ನು ನಿಲ್ಲಿಸುತ್ತಿರುವ ಬಗ್ಗೆ.
2. ಭವಾನಿ ರವರು ಸಲ್ಲಿಸಿರುವ ಮನವಿ:
   - ಎ. ಬಾಯ್ಸ್ ಸ್ಕೂಲ್ ಹಿಂಭಾಗದಲ್ಲಿರುವ ರಸ್ತೆಯಲ್ಲಿ ಅನಧಿಕೃತ ಪಾರ್ಕಿಂಗ್‌ನಿಂದ ಆಗುತ್ತಿರುವ ತೊಂದರೆ ಕುರಿತು.
   - ಬಿ. ವಾರ್ಡಿನಲ್ಲಿರುವ ಪಾರ್ಕ್‌ಗಳ ನಿರ್ವಹಣೆ ಬಗ್ಗೆ.
3. ನಂದ ರವರು ಸಲ್ಲಿಸಿರುವ ಮನವಿವ:
   - ಎ. ಕೃಷ್ಣಪ್ಪ ಗಾರ್ಡನ್ ರಸ್ತೆಯ ಬಗ್ಗೆ.
4. ಸುರೇಂದ್ರ ರವರು ಸಲ್ಲಿಸಿರುವ ಮನವಿ ಪತ್ರ.
   - ಎ. ಮಾಯಾಬಜಾರ್‌ನಲ್ಲಿ ಡ್ರೈನೇಜ್ ಪೈಪ್‌ಲೈನ್ ಬದಲಾಯಿಸಲು ಮನವಿ.
   - ಬಿ. ಸಿ.ಸಿ. ಕ್ಯಾಮಾರಾ ಅಳವಡಿಸುವ ಬಗ್ಗೆ.
   - ಸಿ. ಮಯಾಬಜಾರ್ ಪ್ರದೇಶದಲ್ಲಿರುವ ಸಾರ್ವಜನಿಕ ಶೌಚಾಲಯದ ದುರಸ್ಥಿ ಕುರಿತು.
5. ಪುರುಷೋತ್ತಮ ರವರು ಸಲ್ಲಿಸಿರುವ ಆಸ್ಟಿನ್‌ಟೌನ್ ಪ್ರದೇಶದ ಸಮಸ್ಯೆಗಳ ಕುರಿತು.
   - ಎ. ಬೋರ್‌ವೆಲ್ ರಿಪೇರಿ
   - ಬಿ. ಸ್ಟ್ರೀಟ್ ಲೈಟ್‌ಗೆ ಅಳವಡಿಸಿರುವ ಕೇಬಲ್ ಬದಲಾಯಿಸುವ ಬಗ್ಗೆ.
   - ಸಿ. ಡ್ರೈನೇಜ್ ಬ್ಲಾಕ್ ಆಗುತ್ತಿರುವ ಕುರಿತು.
   - ಡಿ. ಸ್ಟ್ರೀಟ್ ಲೈಟ್ ನಿರ್ವಹಣೆ ಕುರಿತು.
   - ಇ. 3ನೇ ಸ್ಕ್ವೇರ್‌ನಲ್ಲಿ ಸಿ.ಸಿ. ಕ್ಯಾಮರಾ ಕೆಲಸ ಮಾಡುತ್ತಿಲ್ಲ.
   - ಎಫ್. ಪೋಲೀಸ್ ಬೀಟ್ ಹೆಚ್ಚಿಸುವ ಕುರಿತು.

**<u>ವಾರ್ಡ್ ಸಮಿತಿ ಸಭೆಯ ನಡಾವಳಿಗಳು</u>**

| ಕ್ರ. ಸಂ | ಚರ್ಚಿಸಿದ ವಿಷಯಗಳು | ಕೈಗೊಳ್ಳಬೇಕದ ಕ್ರಮ | ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳ ವಿವರ |
|---|---|---|---|
| 1 | **ರಾಜಕುಟ್ಟಿ ರವರು ಸಲ್ಲಿಸಿರುವ ಮನವಿ:**<br>ಎ. ಯರಪ್ಪ ಗಾರ್ಡನ್‌ನಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು ಸಮಸ್ಯೆಯನ್ನು ಪರಿಹರಿಸುವಂತೆ ಮನವಿ ಮಾಡಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧಿಕಾರಿಗಳಿಗೆ ಸಮಸ್ಯೆ ಪರಿಹರಿಸುವಂತೆ ಸೂಚಿಸಿದರು | ಶ್ರೀನಿವಾಸ್,<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ<br>9845444052 |
| | **b. ಆಸ್ಟಿನ್‌ಟೌನ್ 1ನೇ ಸ್ಕ್ವೇರ್ ಗ್ರೌಂಡ್‌ನ ಕಾಂಪೌಂಡ್ ಗೋಡೆ ಹಾಳಾಗಿದ್ದು, ಇದನ್ನು ಸರಿಪಡಿಸುವಂತೆ ಕೋರಿರುತ್ತಾರೆ.** | ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಆಟದ ಮೈದಾನಗಳ ನಿರ್ವಹಣೆಯು ಪಾಲಿಕೆಯ ಯೋಜನೆ ವಿಭಾಗದಿಂದ ನಿರ್ವಹಿಬೇಕಾಗಿದ್ದು, ಈ ಬಗ್ಗೆ ಪೂರ್ವ ವಲಯದ ಯೋಜನೆ ವಿಭಾಗಕ್ಕೆ ಪತ್ರ ಬರೆದು ಸಮಸ್ಯೆ ಪರಿಹರಿಸಲು ಸೂಚಿಸಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿದರು. | ಪದ್ಮರಾಜ್ ಖೋತ್<br>ಸಹಾಯಕ ಅಭಿಯಂತರರು<br>(ಯೋಜನೆ-ಪೂರ್ವ)<br>ಬಿ.ಬಿ.ಎಂ.ಪಿ |

| | | | |
|---|---|---|---|
| | c. ಯರ್ರಪ್ಪ ಗಾರ್ಡನ್‌ನಲ್ಲಿರುವ ಬಾಯ್ಸ್ ಸ್ಕೂಲ್ ಹತ್ತಿರ ಪಾಲಿಕೆಯ ಕಸದ ಗಾಡಿಗಳನ್ನು ನಿಲ್ಲಿಸುತ್ತಿದ್ದು, ಶಾಲೆಗಳು ಪ್ರಾರಂಭವಾಗುತ್ತಿರುವುದರಿಂದ ಈ ಗಾಡಿಗಳನ್ನು ಬೇರೆಡೆ ನಿಲ್ಲಿಸಲು ಕೋರಿರುತ್ತಾರೆ. | ಈ ಬಗ್ಗೆ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಅಗತ್ಯ ಕ್ರಮವಹಿಸುವಂತೆ ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. | ಅಪ್ಪರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>(ಘನತ್ಯಾಜ್ಯ ನಿರ್ವಹಣೆ- ಶಾಂತಿನಗರ ವಿಭಾಗ)<br>ಬಿ.ಬಿ.ಎಂ.ಪಿ |
| 2 | **ಭವಾನಿ ರವರು ಸಲ್ಲಿಸಿರುವ ಮನವಿ:**<br>ಬಿ. ಯರಪ್ಪ ಗಾರ್ಡನ್‌ನ ಬಾಯ್ಸ್ ಶಾಲೆ ಹಿಂಭಗದ ರಸ್ತೆಯಲ್ಲಿ ಎರಡು ಬದಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಆಗುತ್ತಿರುವ ಸಮಸ್ಯೆಯನ್ನು ಪರಿಹರಿಸುವಂತೆ ಕೋರಿರುತ್ತಾರೆ. | ಅನಧಿಕೃತ ವಾಹನ ನಿಲುಗಡೆಯಿಂದ ಆಗುತ್ತಿರುವ ಸಮಸ್ಯೆಯನ್ನು ಕೂಡಲೇ ಪರಿಹರಿಸುವಂತೆ ಮಾನ್ಯ ಶಾಸಕರು ಸಂಚಾರಿ ಪೋಲೀಸರಿಗೆ ನಿರ್ದೇಶಿಸಿದರು. | ಸಂಚಾರಿ ಪೋಲೀಸ್<br>ವಿವೇಕನಗರ |
| | b. ವಾರ್ಡಿನಲ್ಲಿರುವ ಹಲವಾರು ಉದ್ಯಾನವನಗಳು ನಿರ್ವಹಣೆ ಇಲ್ಲದೇ ಬಹಳ ಕೆಟ್ಟ ಸ್ಥಿತಿಯಲ್ಲಿರುತ್ತವೆ, ಈ ಬಗ್ಗೆ ಇಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ವಿಚಾರಿಸಿದಾಗ ನಮಗೆ ಪಾಲಿಕೆ ವತಿಯಿಂದ ವೇತನ ಪಾವತಿ ಆಗಿಲ್ಲ ಆದ್ದರಿಂದ ನಾವು ನಿರ್ವಹಣೆ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ, ಆದ್ದರಿಂದ ಈ ಬಗ್ಗೆ ಕ್ರಮಕೈಗೊಳ್ಳಲು ಕೋರಿರುತ್ತಾರೆ. | ಉದ್ಯಾನವನಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಪಾಲಿಕೆಯ ತೋಟಗಾರಿಕಾ ಅಧೀಕ್ಷಕರಿಂದ ವೇತನ ಪಾವತಿ ಮಾಡಬೇಕಾಗಿದ್ದು, ಕೂಡಲೇ ಕ್ರಮವಹಿಸುವಂತೆ ಮಾನ್ಯ ಶಾಸಕರು ಸೂಚಿಸಿದರು. | ತೋಟಗಾರಿಕಾ ಅಧೀಕ್ಷಕರು<br>(ಪೂರ್ವ)<br>ಬಿ.ಬಿ.ಎಂ.ಪಿ |
| 3 | **ನಂದ ರವರು ಸಲ್ಲಿಸಿರುವ ಮನವಿ:**<br>ಬಿ. ಕೃಷ್ಣಪ್ಪ ಗಾರ್ಡನ್‌ನಲ್ಲಿ ಹೊಸದಾಗಿ ಸ್ಯಾನಿಟರಿ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಅಗೆದಿರುತ್ತಾರೆ. ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆ ಸರಿಮಾಡಿರುವುದಿಲ್ಲ. ಆದ್ದರಿಂದ ಕೂಡಲೇ ರಸ್ತೆ ದರುಸ್ಥಿ ಮಾಡುವಂತೆ ಕೋರಿರುತ್ತಾರೆ. | ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ. |
| 4 | ಸುರೇಂದ್ರ ರವರು ಸಲ್ಲಿಸಿರುವ ಮನವಿ ಪತ್ರ.<br>ಬಿ. ಮಾಯಾಬಜಾರ್‌ನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ವತಿಯಿಂದ 3 ಇಂಚಿನ ಡ್ರೈನೇಜ್ ಪೈಪ್‌ಲೈನ್‌ಗಳನ್ನು ಅಳವಡಿಸಿದ್ದು, ಇವುಗಳನ್ನು 6 ಇಂಚಿನ ಪೈಪ್‌ಲೈನ್‌ಗಳನ್ನಾಗಿ ಬದಲಾಯಿಸಲು ಮನವಿ ಮಾಡಿರುತ್ತಾರೆ. | ಪೈಪ್‌ಲೈನ್ ಬದಲಾಯಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಮಾನ್ಯ ಶಾಸಕರು ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧಿಕಾರಿಗಳಿಗೆ ಸೂಚನೆ ನೀಡಿದರು. | ಶ್ರೀನಿವಾಸ್,<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| | ಬಿ. ಮಾಯಾಬಜಾರ್ ಪ್ರದೇಶದಲ್ಲಿ ಸಿ.ಸಿ.ಟಿ.ವಿ. ಗಳನ್ನು ಅಳವಡಿಸಬೇಕಾಗಿರುತ್ತದೆ ಮತ್ತು ಈಗಾಗಲೇ ಅಳವಡಿಸಿರುವ ಸಿ.ಸಿ.ಟಿ.ವಿ.ಗಳ ನಿರ್ವಹಣೆ ಕುರಿತು ಮನವಿ ಸಲ್ಲಿಸಿರುತ್ತಾರೆ. | ಈ ಬಗ್ಗೆ ಪಾಲಿಕೆಯ ವಿದ್ಯುತ್ ವಿಭಾಗದ ಕಿರಿಯ ಅಭಿಯಂತರರಾದ ಶ್ರೀ. ಮಂಜಪ್ಪ ರವರು ಕೂಡಲೇ ಸಿ.ಸಿ.ಕ್ಯಾಮರಾ ಅಳವಡಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |

| | | | |
|---|---|---|---|
| | ಛ. ಮಾಯಾಬಜಾರ್ ಪ್ರದೇಶದಲ್ಲಿರುವ ಸಾರ್ವಜನಿಕ ಶೌಚಾಲಯವು ಹಾಳಾಗಿದ್ದು, ಇದನ್ನು ಕೂಡಲೇ ದುರಸ್ಥಿ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ. | ಈ ಬಗ್ಗೆ ಪಾಲಿಕೆಯ ಕಾಮಗಾರಿ ಇಲಾಖೆಯಿಂದ ಮತ್ತು ಘನತ್ಯಾಜ್ಯ ನಿರ್ವಹಣೆಯ ವಿಭಾಗದಿಂದ ಅಗತ್ಯ ಕ್ರಮವಹಿಸುವಂತೆ ಮಾನ್ಯ ಶಾಸಕರು ಸೂಚಿಸಿರುತ್ತರೆ. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br><br>ಅಪ್ಪುರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>(ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ)<br>ಬಿ.ಬಿ.ಎಂ.ಪಿ |
| 5 | **ಪುರುಷೋತ್ತಮ ರವರು ಸಲ್ಲಿಸಿರುವ ಆಸ್ಟಿನ್‌ಟೌನ್ ಪ್ರದೇಶದ ಸಮಸ್ಯೆಗಳ ಕುರಿತು.**<br>ಜಿ. ಬೋರ್‌ವೆಲ್ ರಿಪೇರಿ | ಈ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಬೋರ್‌ವೆಲ್ ವಿಭಾಗ ಇಂಜಿನಿಯರ್ ಆದ ಸಿ. ನಂಜುಂಡಯ್ಯ ರವರು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ | ಸಿ. ನಂಜುಂಡಯ್ಯ<br>ಬಿ.ಡಬ್ಲ್ಯು.ಎಸ್.ಎಸ್.ಬಿ.<br>(ಬೋರ್‌ವೆಲ್) |
| | ಝ. ಸ್ಟ್ರೀಟ್‌ಲೈಟ್‌ಗೆ ಅಳವಡಿಸಿರುವ ಕೇಬಲ್ ಬದಲಾಯಿಸವು ಕುರಿತು ಮನವಿ ಮಾಡಿರುತ್ತಾರೆ. | ಈ ಬಗ್ಗೆ ಪಾಲಿಕೆಯ ವಿದ್ಯುತ್ ವಿಭಾಗ ಅಭಿಯಂತರರಾದ ಶ್ರೀ. ಮಂಜಪ್ಪ ರವರು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ | ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| | ಞ. ಡ್ರೈನೇಜ್ ಬ್ಲಾಕ್ ಆಗುತ್ತಿರುವ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ | ಶ್ರೀನಿವಾಸ್,<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| | ಜ. ವಾರ್ಡಿನಲ್ಲಿ ಅಳವಡಿಸಿರುವ ಸ್ಟ್ರೀಟ್ ಲೈಟ್‌ಗಳ ನಿರ್ವಹಣೆಯು ಸಮರ್ಪಕವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. | ವಿದ್ಯುತ್ ವಿಭಾಗ ಅಭಿಯಂತರರಾದ ಶ್ರೀ. ಮಂಜಪ್ಪ ರವರು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ | ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| | ಜ. ವಾರ್ಡಿನ 3ನೇ ಸ್ಕ್ವೇರ್‌ನಲ್ಲಿ ಅಳವಡಿಸಿರುವ ಸಿ.ಸಿ. ಕ್ಯಮರಾಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ | | |
| | ಜಿ. ವಾರ್ಡಿನಲ್ಲಿ ಪೋಲೀಸ್ ಪೆಟ್ರೋಲಿಂಗ್ ಕಡಿಮೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. | ಮಾನ್ಯ ಶಾಸಕರು ಪೋಲೀಸ್ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಪೋಲೀಸ್ ಇಲಾಖೆ<br>ವಿವೇಕನಗರ ಪೋಲೀಸ್ ಠಾಣೆ |

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರಿಗೆ, ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 114 ಅಗರಂ**
**ಬಿ.ಬಿ.ಎಂ.ಪಿ**

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. **ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಛೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.**
8. ಕಛೇರಿ ಪ್ರತಿ.